ಕೊಳ್ಳೇಗಾಲ ತಾಲ್ಲೂಕು ರಾಮನಗುಡ್ಡ ಕೆರೆ ನಿರ್ಮಾಣದ ಬಗ್ಗೆ.

೨೬ (೨೦) ಶ್ರೀ ರಾಜುಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಹಾಗೂ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ!

ಅ) ಕೊಳ್ಳೇಗಾಲ ತಾಲ್ಲೂಕು ರಾಮನಗುಡ್ಡ ಕೆರೆಯ ನಿರ್ಮಾಣಕ್ಕೆ ತಗಲಿರುವ ವೆಚ್ಚವೆಷ್ಟು;

ಆ) ವ್ಯವಸಾಯಕ್ಕೆ ನೀರು ಕೊಡಲು ಇರುವ ಅಡ್ಡಿ ಆತಂಕಗಳೇನು?

ಶ್ರೀ ಹೆಚ್. ಡಿ. ದೇವೇಗೌಡ.—(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)

ಅ) ೧೯೮೫ ಫೆಬ್ರುವರಿವರೆಗೆ ೩೩.೫೦ ಲಕ್ಷ ರೂಪಾಯಿಗಳು ವೆಚ್ಚವಾಗಿರುತ್ತದೆ.

ಆ) ಕೆರೆಗೆ ನೀರು ಬಾರದಿರುವ ಕಾರಣ ವ್ಯವಸಾಯಕ್ಕೆ ನೀರು ಬಿಡಲು ಸಾಧ್ಯವಾಗಿಲ್ಲ.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಈ ಉತ್ತರದಿಂದ ನನಗೆ ಸಮಾಧಾನ ಆಗಿಲ್ಲ. ಮಾನ್ಯ ಸಚಿವರು ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಕಾಲುವೆ ನಿರ್ಮಾಣ ಆಗಿದೆಯೆಂದು ಮಾನ್ಯ ಸಚಿವರು ಸುಳ್ಳು ಉತ್ತರವನ್ನು ಕೊಟ್ಟಿದ್ದಾರೆ. ಹೋದಸಲ ಕೆರೆಯಲ್ಲಿ ನೀರು ತುಂಬಿತ್ತು. ಅದರ ಉಪಯೋಗವಾಗಲಿಲ್ಲ. ಕೂಡಲೇ ಕೆರೆಯ ನಿರ್ಮಾಣವನ್ನು ಕೈಗೆತ್ತಿಕೊಳ್ಳಬೇಕು. ಇದನ್ನು ಮಾಡುತ್ತೀರಾ ?

ಶ್ರೀ ಬಸವರಾಜ ಪಾಟೀಲ್ ಅತ್ತೂರ್.—ಸನ್ಮಾನ್ಯ ಅಧ್ಯಕ್ಷರೇ, ೧೯೮೪-೮೫ನೇ ಇಸವಿಯಲ್ಲಿ ಇದಕ್ಕಾಗಿ ಸುಮಾರು ೨೨ ಲಕ್ಷ ೭೭ ಸಾವಿರ ರೂಪಾಯಿಗಳು ಖರ್ಚಾಗಿದೆ. ರೈಟ್ ಬ್ಯಾಂಕ್ ಕ್ಯಾನಲ್ ಕೆಲಸ ಪೂರ್ತಿಯಾಗಿದೆ.

ಶ್ರೀ ಜಿ. ರಾಜುಗೌಡ.—ಎಡದಂಡೆ ಬಲದಂಡೆ ಕಾಲುವೆಯ ಯಾವ ಕೆಲಸವೂ ಆಗಿಲ್ಲ. ಕೆರೆ ಮಾತ್ರ ಇದೆ. ಮಾನ್ಯ ಮಂತ್ರಿಗಳು ದಯವಿಟ್ಟು ಒಮ್ಮೆ ಇಲ್ಲಿಗೆ ಭೇಟಿ ನೀಡಬೇಕು. ಅಲ್ಲಿಯವರೆಗೆ ಈ ಪ್ರಶ್ನೆಯನ್ನು ತಡೆಹಿಡಿಯಬೇಕು ಸ್ವಾಮಿ.

ಶ್ರೀ ಹೆಚ್. ಡಿ. ದೇವೇಗೌಡ.—ಎಡದಂಡೆ ಅಥವಾ ಬಲದಂಡೆ ಕೆಲಸವಾಗಿಲ್ಲವೆಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಮಗೆ ಬಂದಿರತಕ್ಕಂಥ ಅಧಿಕಾರಿಗಳ ವರದಿಯ ಪ್ರಕಾರ ರೈಟ್ ಬ್ಯಾಂಕ್ ಕ್ಯಾನಲ್ ಕೆಲಸ ಮುಗಿದಿದ್ದು, ಲೆಫ್ಟ್ ಬ್ಯಾಂಕ್ ಕ್ಯಾನಲ್ ಕೆಲಸಕ್ಕೆ ಲ್ಯಾಂಡ್ ಅಕ್ವಿಸಿಷನ್ ಸಮಸ್ಯೆ ಇದೆ. ಆದರೆ ಮಾನ್ಯ ಸದಸ್ಯರು ಏನು ಹೇಳುತ್ತಾರೆ, ಇದನ್ನು ನಾನು ಗುರುತರವಾದ ಆಪಾದನೆ ಎಂದು ಭಾವಿಸುತ್ತೇನೆ. ಬಲದಂಡೆ ನಾಲೆ ಕೆಲಸ ಮುಗಿದಿಲ್ಲವೆಂದು ಅವರು ಹೇಳುತ್ತಿದ್ದಾರೆ, ನಾನು ಮಾನ್ಯ ಸದಸ್ಯರಿಗೆ ಆಸ್ವಾಸನೆ ಕೊಡುತ್ತೇನೆ ಏನೆಂದರೆ ನಾನೇ ಸ್ಥಳ ಪರಿಶೀಲನೆ ಮಾಡುತ್ತೇನೆ. ಒಂದು ವೇಳೆ ಬಲದಂಡೆ ಕೆಲಸ ಆಗದೆ, ಸರ್ಕಾರಕ್ಕೆ ಸುಳ್ಳು ವರದಿಯನ್ನು ಕೊಟ್ಟಿದ್ದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶೀಘ್ರವಾಗಿ ಆದಷ್ಟು ಕಾಠಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯದ ಬಗ್ಗೆ

೨೭ (೨೨) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ ಮಂಜೂರಾಗಿದ್ದು ಈವರೆಗೆ ಹಣ ಪಾವತಿ ಮಾಡಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಹಣ ಪಾವತಿ ಮಾಡದಿರಲು ಕಾರಣವೇನು?

ಇ) ಹೆರಿಗೆ ಭತ್ಯದ ಸೌಲಭ್ಯ ತಾಲ್ಲೂಕು ಕೇಂದ್ರಗಳಲ್ಲಿ ವಾಸ ಮಾಡುವ ಕೂಲಿ ಕಾರ್ಮಿಕ ಸ್ತ್ರೀಯರಿಗೆ ಅನ್ವಯವಾಗುವುದೇ?